ಇ) ದೇಶದ ರಕ್ಷಣೆಗೆ ಪ್ರಾಣ ಕೊಡುತ್ತಿರುವ ಸಿಪಾಯಿಗಳಿಗೆ ಭೂ ಮಂಜೂರಾತಿ ಪಡೆಯಲು ಕಾನೂನು ಪ್ರಕಾರ ಅವಕಾಶ ಇದ್ದರೂ ಸಹ ಮಂಜೂರಾತಿ ಮಾಡದೇ ತೊಂದರೆ ಕೊಡುವ ಪ್ರವೃತ್ತಿ ಸರಿಯೇ; ವಿವರ ತಿಳಿಸುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು.

ಆ) ಹೌದು. ಸದರಿ ಅರ್ಜಿದಾರರಿಗೆ ದಿನಾಂಕ 28-8-1996ರಲ್ಲಿ ಮತ್ತು 21-1-2001 ರಲ್ಲಿ ಪ್ರತಿಭಾರಿ 2-00 ಎಕರೆ ಸೇರಿ ಒಟ್ಟು 4-00 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಹೊಂಗಳಲ್ಲಿ ದಾರಿ ಕಲ್ಪಿಸುವುದು

201 (610) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ವ್ಯವಹಾಸ ಮಾಡುತ್ತಿರುವ ಅನೇಕ ರೈತರು ತಮ್ಮ ಹೊಲಗಳಿಗೆ ಹೋಗಲು ದಾರಿ ಇಲ್ಲದೆ ಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗದರೆ ಸರ್ಕಾರ ಈ ಕುರಿತು ಯಾವ ಕ್ರಮ ಕೈಗೊಂಡಿದೆ.

ಆ) ಒಂದು ಸರ್ವೆ ನಂಬರಿನಲ್ಲಿರುವ ಭೂಮಾಲೀಕರು ಅವಿಭಕ್ತ ಕುಟುಂಬದ ಸದಸ್ಯರು ವಿಭಜನೆಯಾಗಿ ತಮ್ಮ ಹೊಲಗಳಿಗೆ ತಲುಪಲು ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿನಲ್ಲಿಯೂ ದಾರಿ ಕಾಯ್ದಿರಿಸುವಂತೆ ಸರ್ಕಾರ ಕಾನೂನು ಹೊಂದಿದೆಯೇ;

ಇ) ರಸ್ತೆ ಹಕ್ಕನ್ನು ಹೊಂದಿದರೆ ರೈತರಿಗೆ ಆಗುವ ತೊಂದರೆಗಳಿಗೆ ಅನೇಕ ವ್ಯವಸಾಯಗಾರರು ಕಷ್ಟಗಳನ್ನು ಅನುಭವಿಸುತ್ತಿದ್ದು ಈ ಕುರಿತು ಸರ್ಕಾರವು ಹೊಸ ಕಾಯ್ದೆ ರೂಪಿಸುವುದು ಅವಶ್ಯಕ ಅನಿಸುವುದಿಲ್ಲವೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಜಮೀನುಗಳಿಗೆ ರಸ್ತೆ ಸೌಕರ್ಯ ಕಲ್ಪಿಸಲು ಭೂ ದಾಖಲೆಗಳ ಇಲಾಖೆಯವರು ರಸ್ತೆಗಳನ್ನು ನಕ್ಷೆಯಲ್ಲಿ ಅಳವಡಿಸಿರುತ್ತಾರೆ. ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ರಸ್ತೆಗಾಗಿ ಜಮೀನು ಕಾಯ್ದಿರಿಸಲಾಗುವುದು. ಈಗಾಗಲೇ ನಕಾಶೆಯಲ್ಲಿ ಕಾಯ್ದಿರಿಸಿದ ರಸ್ತೆಗಳನ್ನು ಒತ್ತುವರಿ ಮಾಡಿದ್ದಲ್ಲಿ ಖುಲ್ಲಾಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ.

ಇ) ಇಲ್ಲ.